

ಬೇವನ್ನು ಮೆಲ್ಲಗೆ ತಟ್ಟೆಯ ಕೆಳಕ್ಕೆ ಸರಿಸಿ, ಬೆಲ್ಲವನ್ನು ಬಾಯಿಗೆ ಎಸೆದುಕೊಂಡು, ಸವಿಯನ್ನು ಅನುಭವಿಸುತ್ತಾ ಟಿವಿ ನೋಡುತ್ತಿದ್ದೆ.

ಮೊನ್ನೆ ಬಿಳಿ ಇದ್ದ ಕೂದಲು ಇಂದು ಕಪ್ಪಾದುದು ಹೇಗೆ? ಹೀಗೂ.... ಉಂಟೆ? ಎಂದ ಛಿ ಟಿವಿ ವರದಿಗಾರ.

'ಡೈರಿ' ಎಂದ ಪುಢಾರಿ ಪಾಪಣ್ಣ!

ಡೈರಿ ಬರೆದರೆ ಬಿಳಿಯ ಕೂದಲು ಕಪ್ಪಾಗುತ್ತಾ?

ಊಹೂಂ. ಡೈರಿ ಬರೆದು, ಅದು ಸಿಗಬಾರದವರಿಗೆ ಸಿಕ್ಕರೆ ತಲೆ ಮೊಸರು ಗಡಿಗೆಯಾಗಿ, ಗಡಿಗೆಯ ಕಪ್ಪುಬಣ್ಣ ಇದ್ದ ಕೂದಲು ಮೊಸರಿನ ಬಿಳಿ ಬಣ್ಣಕ್ಕೆ ತಿರುಗುತ್ತೆ. ಬರೆದವರ ಗತಿ ಗೋವಿಂದ ಆಗುತ್ತೆ. ನಾನು ಹೇಳಿದ್ದು ಡೈ, ರೀ ಅಂತ. ಅಂದರೆ ಡೈ ಉರುಫ್ ಬಣ್ಣ ಉರುಫ್ ಕಲರ್! ಅರ್ಥಾತ್ ಕಲ್ಲರ್‍ರು ಹಚ್ಕೊಂಡಿದೀನ್ರೀ– ಅಂದ ಪಾಪಣ್ಣ!

ಪುಢಾರಿ ಪಾಪಣ್ಣನ ಮಾತು ನನ್ನನ್ನು ಡೈರಿಗಳ ಲೋಕಕ್ಕೆ ಕರೆದೊಯ್ದಿತು. ಆಹಾ! ಬಾಲ್ಯದಲ್ಲಿ ನನ್ನ ಅಜ್ಜ ತನ್ನ ಪ್ರಾಯಕಾಲದಲ್ಲಿ ಬರೆದಿದ್ದ ಡೈರಿಯೊಂದನ್ನು ನನಗೆ ಆಟ ಆಡಿಕೊಳ್ಳಲು ಕೊಟ್ಟರು. ಡೈರಿಯ ಪುಟಗಳಲ್ಲೆಲ್ಲ ಕಾಫಿಯದೋ, ನಶ್ಯದ್ದೋ ಕರೆ; ಪುಟದ ಕಿವಿಗಳೆಲ್ಲ ಜಾತಿನಾಯಿಯ ಕಿವಿಗಳಂತೆ ಮಡಚಿಕೊಂಡಿದ್ದವು. ಪುಟ ತೆಗೆದು ನೋಡಿದೆ. ಮೋಡಿ ಅಕ್ಷರಗಳ ಸಾಲು ಸಾಲುಗಳು ತುಂಬಿದ್ದು, ಪ್ರತಿ ಪುಟವೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರೋಗಿ ಕೊನೆಯುಸಿರು ಎಳೆಯುವುದಕ್ಕೆ ಮುಂಚೆ ಎಲೆಕ್ಟ್ರೋಕಾರ್ಡಿಯೋಗ್ರಾಮ್ ಯಂತ್ರವು ಮೂಡಿಸುವ ಎರ್‍ರಾಬಿರ್‍ರಿ ಶಿರ, ಕಣಿವೆಗಳ ಹೃದಯ ಬಡಿತದ ಚಿತ್ರಣದಂತೆ ಕಂಡುಬರುತ್ತಿದ್ದವು.

ಇದನ್ನು ಓದುವುದು ಹೇಗೆ? ಎಂದು ಅಜ್ಜನನ್ನು ಕೇಳಿದೆ.

ದಡ್ಡ! ಬ್ರಹ್ಮ ಬರೆಯುವ ಬರಹ, ಡಾಕ್ಟರ್ ಬರೆಯುವ ಪ್ರಿಸ್ಕ್ರಿಪ್ಶನ್ನು, ಪ್ರೈವೇಟಾಗಿ ಬರೆಯುವ ಡೈರಿ ಅರ್ಥವಾಗದ ರೀತಿಯಲ್ಲೇ ಇರಬೇಕು– ತಿಳಿಹೇಳಿದರು ಅಜ್ಜ.

ಆದರೇನು! ಎಲ್ಲರಿಗೂ ಅರ್ಥವಾಗದ ರೀತಿಯಲ್ಲಿ ಬರೆಯುವ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲವಲ್ಲ! ಇದಕ್ಕೆ ಸೀನುವಿನದೇ ಒಳ್ಳೆಯ ಉದಾಹರಣೆ.

ಸೀನುವಿನದು ಮುತ್ತು ಪೋಣಿಸಿದಂತಹ ಅಕ್ಷರಗಳು. ಅಂದು ಅವನು ಆಫೀಸಿಗೆ ಹೋಗುವ ಗಡಿಬಿಡಿಯಲ್ಲಿ ತನ್ನ ಪಾಕೆಟ್ ಡೈರಿಯನ್ನು ಮನೆಯಲ್ಲಿ ಬಿಟ್ಟು ಹೋಗಿದ್ದ. ಇತರರ ಫೋಟೋ, ಡೈರಿ, ಪರ್ಸುಗಳನ್ನು ಕದ್ದು ನೋಡದಿದ್ದರೆ ಅವರನ್ನು ಯಾರಾದರೂ ಮನುಷ್ಯ ಅಂತ ಕರೆಯಲು ಸಾಧ್ಯವೆ? ಸೀನುವಿನ ಮಡದಿ ತುಂಬ ಮನುಷ್ಯತ್ವ ಉಳ್ಳವಳು! ಡೈರಿಯ ಪುಟ ಪುಟಗಳನ್ನು ತಿರುವಿದಳು. ಪಟಪಟನೆ ಕಣ್ಣೀರು ಸುರಿಯಲಾರಂಭಿಸಿತು. ಸಂಜೆ ಸೀನು ಮನೆಗೆ ಮರಳಿದಾಗ ಪಾಂಚಜನ್ಯ, ದೇವದತ್ತ, ಪೌಂಡ್ರಗಳನ್ನು ಒಟ್ಟಿಗೆ ಮೊಳಗಿಸಿದರೆ ಉಂಟಾಗುವಷ್ಟು ಸದ್ದಿನಿಂದ ಮಡದಿ ಅವನನ್ನು ಎದುರುಗೊಂಡಳು. ಕಣ್ಣುಗಳಲ್ಲಿ ಬೇಸಿಗೆಯಲ್ಲಿ ಬಂಡಿಪುರದಲ್ಲಿ ಹರಡುವ ಅಗ್ನಿಯ ಪ್ರಖರತೆ; ಜೊತೆಜೊತೆಗೇ ಚೆನ್ನೈನಲ್ಲಿ ಏರಿಬಂದ ಸುನಾಮಿಯಂತಹ ಕಣ್ಣೀರು.

ಏನಾಯಿತೇ?

ಮಡದಿ ಡೈರಿಯನ್ನು ಅವನ ಮುಂದೆ ಎಸೆಯುತ್ತಾ 'ಈ ನಡುವೆ ನನ್ನ ಮೇಲೆ ನಿಮಗೆ ಆಸಕ್ತಿ ಯಾಕೆ ಕಡಿಮೆ ಆಗಿದೆ ಎನ್ನುವ ಗುಟ್ಟು ಈಗ ಗೊತ್ತಾಯ್ತು. ಯಾರ್‍ರೀ ಈ ಉಮಾ, ಸುಜಾತ, ಈಶ್ವರಿ ಎಲ್ಲರೂ? ಜೊತೆಗೆ ನರ್ತಕಿ ಬೇರೆ! ಕ್ಯಾಸಾನೋವಾನಾ ನೀವೂ...? ಇವೆಲ್ಲ ಚೆನ್ನಾಗಿರಲ್ಲ' ಎಂದು ಸಿಡಿಲಿನ ದನಿಯಲ್ಲಿ ಪಿಸುಗುಟ್ಟಿದಳು.

'ಉಮಾ ಅಂದರೇ....' ವಿವರಿಸಲು ಯತ್ನಿಸಿದ ಸೀನು.

ಗೊತ್ತು. ಫೋನ್ ಮಾಡಿದ್ದೆ. ಮಾತಿನಲ್ಲೇ ಜೇನು ಸುರಿಸ್ತಾಳೆ ಮಿಟುಕಲಾಡಿ.... ಹಲೋ.... ಉಮಾ ಹಿಯರ್... ಅಂದಳು. ಕವ್ವೆ ಶುಡ್ ಐ ಹಿಯರ್, ಯೂ ನಾನ್ಸೆನ್ಸಿಕಲ್ ಈಡಿಯಟ್ಕೆ ಅಂತ ಹೇಳಿ ಫೋನ್ ಕಟ್ ಮಾಡಿದೆ. ಎಷ್ಟು ದಿನದಿಂದ ನಡೆಯುತ್ತಿದೆ ಇದೆಲ್ಲ?– ಅಗ್ನಿಪರ್ವತ ಸ್ಫೋಟವಾಗುವುದರಲ್ಲಿತ್ತು.

'ಒಂದು ನಿಮಿಷ ಇರು. ಇನ್ನೊಮ್ಮೆ ಫೋನ್ ಮಾಡು' ಹೇಳಿದ ಸೀನು.